UASB Library
Newspaper Clippings
Wednesday 12-10-2022 Pg .1
Jai Kisan

ಬೆಂಗಳೂರು ಕೃಷಿ ವಿಜ್ಞಾನ ವಿವಿ ಸಂಸ್ಥಾಪನಾ ದಿನಾಚರಣೆ

ಕೃಷಿ ಮೇಲೆ ಹವಾಮಾನ ಪರಿಣಾಮ

■ ವಿಕ ಸುದ್ದಿಲೋಕ ಬೆಂಗಳೂರು

ಹವಾಮಾನ ವೈಪರೀತ್ಯ ಮತ್ತು ತಂತ್ರಜ್ಞಾನದ ಅಸಮರ್ಪಕ ಬಳಕೆಯು ಕೃಷಿ ಉತ್ಪನ್ನಗಳ ಮೇಲೆ ಪರಿಣಾಮ ಬೀರುತ್ತಿದೆ ಎಂದು ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಮಹಾ ನಿರ್ದೇಶಕ ಡಾ. ಪಿ. ಚಂದ್ರಶೇಖರ್ ಕಳವಳ ವ್ಯಕ್ತಪಡಿಸಿದರು.

ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದ 57ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ವಿವಿ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಂಗಳವಾರ ಅವರು ಮಾತನಾಡಿದರು.

''ಪ್ರಸ್ತುತ ಒಂದು ಮಿಲಿಯನ್ ಮೆಟ್ರಿಕ್ ಟನ್‌ನಷ್ಟು ಆಹಾರ ಉತ್ಪಾದನೆಯಾಗುತ್ತಿದ್ದರೂ ಶೇಕಡಾ 22 ರಷ್ಟು ಜನರು ಆಪೌಷ್ಟಿಕತೆಯಿಂದ ಹಾಗೂ ಶೇಕಡಾ 20ರಷ್ಟು ಜನರು ಅಧಿಕ ತೂಕದಿಂದ ಬಳಲುತ್ತಿದ್ದಾರೆ. ಇದೇ ರೀತಿ ಮುಂದುವರಿದರೆ 2030ಕ್ಕೆ ಶೇಕಡಾ 23ರಷ್ಟು ಆಹಾರ ಕೊರತೆಯುಂಟಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಹವಾಮಾನ ವೈಪರೀತ್ಯ ಹಾಗೂ ತಂತ್ರಜ್ಞಾನದ ಅಸಮರ್ಪಕ ಬಳಕೆ. ಇದರ ನಿರ್ಮೂಲನೆ ಮಾಡಲು ಆಹಾರ ಸಂರಕ್ಷಣೆ, ಕೃಷಿ ಆದಾಯ ಭದ್ರತೆ, ಮೌಲ್ಯವರ್ಧನೆ ಮತ್ತು ಗುಣಮಟ್ಟದ ಮಾನವ ಸಂಪನ್ಮೂಲ ಬಳಕೆ ಅತ್ಯಗತ್ಯ,'' ಎಂದರು.



ಬೆಂಗಳೂರು ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯವು 57ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ವಿವಿ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದವರನ್ನು ಸನ್ಮಾನಿಸಲಾಯಿತು.

''ಕೋವಿಡ್ ವೇಳೆ ಎಲ್ಲಾ ರಂಗಗಳೂ ಸಂಕಷ್ಟದಲ್ಲಿದ್ದಾಗ ಕೃಷಿ ಕ್ಷೇತ್ರ ಒಂದೇ ಮುನ್ನಡೆ ಸಾಧಿಸಿತು. ಇದಕ್ಕೆ ರೈತರ ಕೊಡುಗೆ ಅಪಾರ. ಆದ್ದರಿಂದ ಕೃಷಿಕ್ಷೇತ್ರದಲ್ಲಿಯುವಜನತೆ ತೊಡಗಿಸಿಕೊಳ್ಳುವುದು ಅತ್ಯವಶ್ಯಕ ಮತ್ತು ಅದಕ್ಕೆ ಸೂಕ್ತ ಪರಿಸರವನ್ನು ಕಲ್ಪಿಸಬೇಕು. ರೈತರು ಕೃಷಿಯನ್ನು ಒಂದು ಉದ್ದಿಮೆಯಾಗಿ ಸ್ವೀಕರಿಸಿದಾಗ ಮಾತ್ರ ಕೃಷಿ ಕ್ಷೇತ್ರದಲ್ಲಿ ಲಾಭ ಗಳಿಸಲು ಸಾಧ್ಯ. ಶೇ.40ರಷ್ಟು ಆದಾಯವನ್ನು ಮಧ್ಯವರ್ತಿಗಳು ಪಡೆಯುತ್ತಿದ್ದು ಇದು ಕೃಷಿಕರಿಗೆ ಮಾರಕವಾಗಿದೆ. ರೈತರು ಸ್ವಸಹಾಯ ಸಂಘಗಳನ್ನು ರಚಿಸಿಕೊಂಡು ತಾವೇ ಮಾರುಕಟ್ಟೆಯನ್ನು ಸೃಷ್ಟಿಸಿಕೊಳ್ಳಬೇಕು,'' ಎಂದರು.

ಕೃಷಿ ವಿವಿ ಕುಲಪತಿ ಡಾ. ಕೆ.ಸಿ. ನಾರಾಯಣಸ್ವಾಮಿ ಮಾತನಾಡಿ, ''ಸಂಸ್ಥಾಪನಾ ದಿನಾಚರಣೆಯು ಬಹಳ ಮಹತ್ತರವಾಗಿದ್ದು ಮುಂದಿನ ಸವಾಲುಗಳನ್ನು ನಿರ್ವಹಿಸಲು ವೇದಿಕೆಯನ್ನು ಒದಗಿಸುತ್ತದೆ. ನಮ್ಮ ವಿವಿಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದು, ಹೊರದೇಶಗಳ ಜತೆ ಬೋಧನೆ, ವಿಸ್ತರಣೆ ಮತ್ತು ಸಂಶೋಧನೆ ಕೈಗೊಳ್ಳಲು ಒಡಂಬಡಿಕೆ ಮಾಡಿಕೊಂಡಿದೆ. ಪ್ರಸ್ತುತ ಕೃಷಿ ವಿವಿ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಆರ್‌ಎಫ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದೆ,'' ಎಂದರು.

ಇದೇ ವೇಳೆ ಅತ್ಯುತ್ತಮ ಸೇವೆ ಸಲ್ಲಿಸಿದ ಶಿಕ್ಷಕರು, ವಿಜ್ಞಾನಿಗಳು ಮತ್ತು ಸಿಬ್ಬಂದಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಕೃಷಿ ವಿವಿ ಅಧಿಕಾರಿ ವರ್ಗ ಹಾಗೂ ಅಡಳಿತ ಮಂಡಳಿ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

12-10-2022
V-Karnataka Pg 12

ಕೃಷಿ ಸಂಶೋಧನೆಯಿಂದ ಆಹಾರಧಾನ್ಯ ಉತ್ಪಾದನೆ ಹೆಚ್ಚಳ

ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯಗಳ ಶಿಕ್ಷಣ, ಸಂಶೋಧನೆ ಮತ್ತು ವಿಸ್ತರಣೆಯಿಂದ ಹಾಗೂ ಸರ್ಕಾರದ ವಿವಿಧ ಯೋಜನೆಗಳ ಪರಿಣಾಮವಾಗಿ ಆಹಾರಧಾನ್ಯಗಳ ಉತ್ಪಾದನೆ ಹೆಚ್ಚಳವಾಗಲು ಕಾರಣವಾಯಿತು ಎಂದು ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಮಹಾನಿರ್ದೇಶಕ ಡಾ. ಪಿ. ಚಂದ್ರಶೇಖರ್ ಅಭಿಪ್ರಾಯಪಟ್ಟರು.

ಕೃಷಿ ವಿಶ್ವವಿದ್ಯಾನಿಲಯದ 57ನೇ ಸಂಸ್ಥಾಪನಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರಸ್ತುತ ಒಂದು ಮಿಲಿಯನ್ ಮೆಟ್ರಿಕ್‌ಟನ್‌ನಷ್ಟು ಆಹಾರ ಉತ್ಪಾದನೆಯಾಗುತ್ತಿದ್ದರೂ ಶೇ.22ರಷ್ಟು ಜನಸಂಖ್ಯೆ ಆಪೌಷ್ಟಿಕತೆಯಿಂದ ಹಾಗೂ ಶೇ.20ರಷ್ಟು ಅಧಿಕ ತೂಕದಿಂದ ಬಳಲುತ್ತಿದ್ದಾರೆ. ಇದೇ ರೀತಿ ಮುಂದುವರೆದರೆ 2030ಕ್ಕೆ ಶೇ.23ರಷ್ಟು ಆಹಾರ ಕೊರತೆಯುಂಟಾಗುತ್ತದೆ ಎಂದರು. ಕೋವಿಡ್-19ರಲ್ಲಿ ಸಂಕಷ್ಟ ಪರಿಸ್ಥಿತಿಯಲ್ಲಿ ಎಲ್ಲಾ ರಂಗಗಳೂ ಸಂಕಷ್ಟದಲ್ಲಿದ್ದರೆ ಕೃಷಿ ಕ್ಷೇತ್ರ ಒಂದೇ ಮುನ್ನಡೆ ಸಾಧಿಸಿತು. ಇದಕ್ಕೆ ರೈತರ ಕೊಡುಗೆ ಅಪಾರ. ಆದ್ದರಿಂದ ಕೃಷಿ ಕ್ಷೇತ್ರದಲ್ಲಿ ಯುವಜನತೆ ತೊಡಗಿಸಿಕೊಳ್ಳುವುದು ಅತ್ಯವರ್ಶಕ ಮತ್ತು ಅದಕ್ಕೆ ಸೂಕ್ತ ಪರಿಸರವನ್ನು ಕಲ್ಪಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ರೈತರು ಕೃಷಿಯನ್ನು ಒಂದು ಉದ್ದಿಮೆಯಾಗಿ ಸ್ವೀಕರಿಸಿದಾಗ ಮಾತ್ರ ಕೃಷಿ ಕ್ಷೇತ್ರದಲ್ಲಿ ಲಾಭ ಗಳಿಸಲು ಸಾಧ್ಯ.ವೆಂದರು.

ಕುಲಪತಿ ಡಾ॥ ಕೆ.ಸಿ.ನಾರಾಯಣಸ್ವಾಮಿ, ಅಧ್ಯಕ್ಷತೆ ವಹಿಸಿ ಮಾತನಾಡಿ ಸಂಸ್ಥಾಪನಾ ದಿನಾಚರಣೆಯು ಬಹಳ ಮಹತ್ತರವಾಗಿದ್ದು ಮುಂದಿನ ಸವಾಲುಗಳನ್ನು ನಿರ್ವಹಿಸಲು ವೇದಿಕೆಯನ್ನು ಒದಗಿಸುತ್ತದೆ. ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದು ಹೊರದೇಶಗಳ ಜೊತೆ ಬೋಧನೆ, ವಿಸ್ತರಣೆ ಮತ್ತು ಸಂಶೋಧನೆ ಕೈಗೊಳ್ಳಲು ಒಡಂಬಡಿಕೆ ಮಾಡಿಕೊಂಡಿದೆ.

ಪ್ರಸ್ತುತ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದ ಜೆಆರ್‌ಎಫ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನಪಡೆದಿದೆ. ಒಂದು ಉತ್ಪನ್ನ ಒಂದು ಜಿಲ್ಲೆ ಯೋಜನೆಡಿ ಕೃಷಿವಿಶ್ವವಿದ್ಯಾನಿಲಯ,ಬೆಂಗಳೂರು ಮುಂಡೂಣೆಯಲ್ಲಿದ್ದು ಇದರ ಪ್ರಯೋಜನವನ್ನು ಕೃಷಿ ಮಹಾವಿದ್ಯಾಲಯ, ಚಾಮರಾಜನಗರ, ಕೃಷಿ ಮಹಾವಿದ್ಯಾಲಯ, ಮಂಡ್ಯ, ಕೃಷಿ ಮಹಾವಿದ್ಯಾಲಯ, ಹಾಸನ ಮತ್ತು ರೇಷ್ಮೆ ಕೃಷಿ ಮಹಾವಿದ್ಯಾಲಯ, ಚಿಕ್ಕಬಳ್ಳಾಪುರ ಪಡೆಯಲಿವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಅತ್ಯುತ್ತಮ ಸೇವೆ ನೀಡಿದ ಶಿಕ್ಷಕರು, ವಿಜ್ಞಾನಿಗಳುಮತ್ತುಸಿಬ್ಬಂದಿಗೆಪ್ರಶಸ್ತಿನೀಡಿಸನ್ಮಾನಿಸಲಾಯಿತು. ಕೃಷಿ ವಿಶ್ವವಿದ್ಯಾನಿಲಯ ಅಧಿಕಾರಿ ವರ್ಗ ಹಾಗೂ ಅಡಳಿತ ಮಂಡಳಿ ಸದಸ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಕೃಷಿ ವಿಶ್ವವಿದ್ಯಾನಿಲಯದ 57ನೇ ಸಂಸ್ಥಾಪನಾ ದಿನಾಚರಣೆಯನ್ನು ಡಾ.ಪಿ.ಚಂದ್ರ ಶೇಖರ್ ಉದ್ಘಾಟಿಸಿದರು. ಕುಲಪತಿ ಡಾ॥ ಕೆ.ಸಿ.ನಾರಾಯಣ ಸ್ವಾಮಿ ಇನ್ನಿತರರು ಪಾಲ್ಗೊಂಡಿದ್ದರು.

12-10-2022
S-karnataka Pg 02

'ಸರ್ಕಾರಿ ಕೆಲಸಕ್ಕಾಗಿ ಕಾಯದೆ ಸ್ವಯಂ ಉದ್ಯೋಗ ಕೈಗೊಳ್ಳಿ'

ಬೆಂಗಳೂರು: ಕೃಷಿ ಪದವೀಧರರು ಸರ್ಕಾರಿ ಉದ್ಯೋಗಕ್ಕೇ ಒತ್ತು ನೀಡದೇ ಸ್ವಯಂ ಉದ್ಯೋಗಕ್ಕೆ ಮುಂದಾಗಬೇಕು. ಸರ್ಕಾರದ ಸಬ್ಸಿಡಿ ಯೋಜನೆಗಳನ್ನು ಬಳಸಿಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದು ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆ ಮಹಾ ನಿರ್ದೇಶಕ ಡಾ। ಪಿ.ಚಂದ್ರಶೇಖರ ಕರೆ ನೀಡಿದರು. ಜಿಕೆವಿಕೆಯಲ್ಲಿ ಏರ್ಪಡಿಸಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 57ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕೃಷಿ ಪದವೀಧರರು ಸರ್ಕಾರಿ ಉದ್ಯೋಗಕ್ಕೆ ಕಾಯುತ್ತಾ ಕೂರದೇ ಸ್ವಯಂ ಉದ್ಯೋಗಕ್ಕೆ ಮುಂದಾಗಬೇಕು. ಆದ್ದರಿಂದ ಕೃಷಿ ಪದವೀಧರರು ಮತ್ತು ರೈತರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಬ್ಸಿಡಿ ಯೋಜನೆ ಬಳಸಿಕೊಂಡು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಕೈಜೋಡಿಸಬೇಕು ಎಂದು ಸಲಹೆ ನೀಡಿದರು. ಅತ್ಯುತ್ತಮ ಸೇವೆ ಸಲ್ಲಿಸಿದ ಶಿಕ್ಷಕರು, ವಿಜ್ಞಾನಿಗಳು ಮತ್ತು ಸಿಬ್ಬಂದಿಯನ್ನು ಇದೇ ಸಂದರ್ಭದಲ್ಲಿ ಗೌರವಿಸಲಾಯಿತು. ಕೃಷಿ ವಿವಿ ಕುಲಪತಿ ಡಾ। ಕೆ.ಸಿ.ನಾರಾಯಣ ಸ್ವಾಮಿ, ವ್ಯವಸ್ಥಾಪಕ ಮಂಡಳಿ ಸದಸ್ಯರಾದ ಪಿ.ಎಚ್.ರಾಮಾಂಜನಿಗೌಡ, ಟಿ.ಎಂ. ಆರವಿಂದ್, ಒ.ಎಸ್. ದಯಾನಂದ, ಸುರೇಶ್, ಆರ್. ಶ್ರೀರಾಮ ಉಪಸ್ಥಿತರಿದ್ದರು.

12-10-2022
Kannadaprabha Pg 03

ಸ್ಮಾರ್ಟ್ ಅಗ್ರಿಕಲ್ಚರ್‌ಗೆ ಒತ್ತು ನೀಡಿ

ಬೆಂಗಳೂರು: ಆಹಾರ ಭದ್ರತೆಯ ಗುರಿ ಸಾಧನೆ ಬೆನ್ನಲ್ಲೇ ಆದಾಯ ಭದ್ರತೆ, ಅಪೌಷ್ಟಿಕತೆ ನಿವಾರಣೆಯಂತಹ ಹಲವು ಸವಾಲುಗಳು ನಮ್ಮ ಮುಂದಿವೆ. ಅವುಗಳನ್ನು ಎದುರಿಸಲು ಕೃಷಿ ವಿಶ್ವವಿದ್ಯಾಲಯಗಳು ಸೇರಿದಂತೆ ವಿಜ್ಞಾನಿಗಳು, ರೈತರು, ತಂತ್ರಜ್ಞರು ಸಜ್ಜಾಗಬೇಕಿದೆ ಎಂದು ಹೈದರಾಬಾದ್‌ನ ಮ್ಯಾನೇಜ್ ಸಂಸ್ಥೆಯ ಮಹಾ ನಿರ್ದೇಶಕ ಡಾ.ಪಿ. ಚಂದ್ರಶೇಖರ್ ತಿಳಿಸಿದರು.

ಹೆಬ್ಬಾಳದಲ್ಲಿ ಮಂಗಳವಾರ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಬರೀ ಆಹಾರ ಉತ್ಪಾದನೆಯಿಂದ ರೈತರ ಆದಾಯ ಹೆಚ್ಚಾಗುವುದಿಲ್ಲ. ವಾಸ್ತವವಾಗಿ ಆದಾಯದ ಮೂಲ ಕಟಾವು ಮತ್ತು ಕೊಯ್ಲೋತ್ತರ ನಾವು ಕೈಗೊಳ್ಳುವ ಕ್ರಮಗಳಲ್ಲಿ ಎನ್ನುವುದನ್ನು ಅರಿಯಬೇಕು. ಉತ್ಪನ್ನಗಳ ಮೌಲ್ಯವರ್ಧನೆ ಮಾಡಿ, ಅವುಗಳನ್ನು ರೈತ ಉತ್ಪಾದಕ ಸಂಘಗಳಡಿ ಮಾರಾಟ ಮಾಡಬೇಕು. ಕೃಷಿಯನ್ನು ಬ್ಯುಸಿನೆಸ್ ಆಗಿ ಪರಿವರ್ತಿಸಬೇಕು. ಗ್ರೇಡಿಂಗ್, ಪ್ಯಾಕಿಂಗ್ ಮತ್ತಿತರ ಕೌಶಲ್ಯ ತರಬೇತಿ ನೀಡಬೇಕು ಎಂದರು.

ರೈತರಿಗೆ ಇನ್‌ಪುಟ್‌ಗಳನ್ನು ವಿತರಿಸುವ ವರಿಗೂ ಅಗತ್ಯ ತರಬೇತಿ ನೀಡಬೇಕಿದೆ. ಇದರಿಂದ ರೈತರಿಗೆ ಪರೋಕ್ಷವಾಗಿ ಅನುಕೂಲ ಆಗಲಿದೆ. ಇನ್‌ಪುಟ್ ಡೀಲರ್ ಗ್ಲಾಗಿಯೇ ದೇಸೀ ವಿವಿಯ ಅವಶ್ಯಕತೆ ಉಂಟಾಗಲಿದೆ ಎಂದರು.

ಹವಾಮಾನ ವೈಪರೀತ್ಯ ಕೃಷಿಗೆ ಎದುರಾಗಲಿರುವ ಮತ್ತೊಂದು ಪ್ರಮುಖ ಸವಾಲು ಆಗಿದೆ. ಒಂದು ಡಿಗ್ರಿ ತಾಪಮಾನ ಏರುಪೇರಾದರೂ ಆಹಾರ ಉತ್ಪಾದನೆಯಲ್ಲಿ ಶೇ. 10-15ರಷ್ಟು ಕುಸಿತ ಕಾಣಲಿದೆ. ಲೆಕ್ಕಾಚಾರದ ಪ್ರಕಾರ 2030ರ ವೇಳೆಗೆ ಇಳುವರಿಯಲ್ಲಿ ಶೇ. 23ರಷ್ಟು ಇಳಿಕೆ ಆಗಲಿದೆ. ಆಗ ಆಹಾರ ಭದ್ರತೆ ಮತ್ತೊಂದು ರೂಪದಲ್ಲಿ ಕಾಡಬಹುದು. ಆದ್ದರಿಂದ ಈಗಿನಿಂದಲೇ ಸ್ಮಾರ್ಟ್ ಅಗ್ರಿಕಲ್ಚರ್‌ಗೆ ಒತ್ತು ನೀಡಬೇಕು ಎಂದು ಹೇಳಿದರು.

ಇದೇ ವೇಳೆ ಸಂಶೋಧನೆ, ವಿಸ್ತರಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಪ್ರಾಧ್ಯಾಪಕರಿಗೆ ಪ್ರಶಸ್ತಿ ಪ್ರದಾನಮಾಡಲಾಯಿತು.ನಿರ್ದೇಶಕರಾದ ಡಾ.ಕೆ. ನಾರಾಯಣಗೌಡ, ಡಾ.ಕೆ.ಬಿ. ಉಮೇಶ್ ಇತರರಿದ್ದರು.

ಮುಂದಿನ ವರ್ಷ ಎನ್‌ಇಪಿ ಜಾರಿ

ಬೆಂಗಳೂರು ಕೃಷಿ ವಿವಿ ಪ್ರಭಾರ ಕುಲಪತಿ ಡಾ.ಕೆ.ಸಿ. ನಾರಾಯಣಸ್ವಾಮಿ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಅನ್ವಯ ಕೃಷಿ ವಿಶ್ವವಿದ್ಯಾಲಯವು ಬರುವ ಶೈಕ್ಷಣಿಕ ವರ್ಷದಿಂದ ಆರಂಭಿಸಲಿದ್ದು, ಈ ಸಂಬಂಧ ಈಗಾಗಲೇ ರೂಪುರೇಷೆಗಳು ಸಿದ್ಧಗೊಳ್ಳುತ್ತಿವೆ. ಭಾರತೀಯ ಕೃಷಿ ಅನುಸಂಧಾನ ಪರಿಷತ್ತು (ಐಸಿಎಆರ್) ಈ ರೂಪುರೇಷೆಗಳ ಸಿದ್ಧತೆಯಲ್ಲಿ ತೊಡಗಿಕೊಂಡಿದೆ. ಅದರಂತೆ ನಾಲ್ಕು ವರ್ಷಗಳ ಪದವಿ ಕೋರ್ಸ್ ಬರುವ ವರ್ಷದಿಂದ ಪರಿಚಯಿಸಲಾಗುವುದು. ಮೊದಲ ವರ್ಷ ಪ್ರಾಯೋಗಿಕ ಶಿಕ್ಷಣ ಇರುತ್ತದೆ. ನಾಲ್ಕೂ ವರ್ಷ ಪೂರೈಸಿದವರಿಗೆ ಕೃಷಿ ಪದವಿ ಜತೆಗೆ ಆನರ್ಸ್ ನೀಡಲಾಗುವುದು ಎಂದು ತಿಳಿಸಿದರು.

12-10-2022
Uadayavani Pg 02

ಕೈಹಿಡಿದ ಮಿಶ್ರ ಬೆಳೆ | ಮೂರೇ ತಿಂಗಳಲ್ಲಿ ಧನರಾಜನಾದ ರೈತ

90 ದಿನ, ₹20 ಲಕ್ಷ ಗಳಿಸಿದ ಧನಪಾಲ

♦ ಮಲ್ಲಿಕಾರ್ಜುನ ತುಂಗಳ

ರಬಕವಿ-ಬನಹಟ್ಟಿ (ಬಾಗಲಕೋಟೆ): ತಾಲೂಕಿನ ಹಳಿಂಗಳಿ ಗ್ರಾಮದ ಬಹುಬೆಳೆಯ ರೂವಾರಿ ರೈತ ಧನಪಾಲ ಯಲ್ಲಪ್ಪ ಕಡಿಮೆ ಅವಧಿ ಮತ್ತು ಕಡಿಮೆ ವೆಚ್ಚದಲ್ಲಿ ಬಹು ಬೆಳೆ ಪದ್ಧತಿಯಿಂದ ಹೆಚ್ಚು ಆದಾಯ ಗಳಿಸಿದ್ದಾರೆ.

ವೈಜ್ಞಾನಿಕವಾಗಿ ಮಿಶ್ರಬೆಳೆಯನ್ನು ಬೆಳೆಯುವ ಮೂಲಕ ಹೆಚ್ಚಿನ ಲಾಭ ಗಳಿಸಲು ಸಾಧ್ಯ ಎಂಬುದನ್ನು ಧನಪಾಲ ಯಲ್ಲಪ್ಪ ಹತ್ತಾರು ಬಾರಿ ತೋರಿಸಿ ಮಾದರಿಯಾಗಿದ್ದಾರೆ. ಹಲವು ರಾಜ್ಯ ಪ್ರಶಸ್ತಿಗಳು, ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದು ಯಶಸ್ವೀ ರೈತರೆನಿಸಿರುವ ಧನಪಾಲ, ತಮ್ಮ 2.10 ಎಕರೆ ಭೂಪ್ರದೇಶದಲ್ಲಿ ಮಿಶ್ರಬೆಳೆಗಳನ್ನು ಅದರಲ್ಲೂ ತರಕಾರಿ ಬೆಳೆಗಳನ್ನೇ ಬೆಳೆದು ಕೇವಲ 90 ದಿನಗಳಿಂದ 110 ದಿನಗಳ ಅವಧಿಯಲ್ಲಿ 20 ಲಕ್ಷಕ್ಕೂ ಹೆಚ್ಚಿನ ಆದಾಯ ಪಡೆಯಲು ಸಾಧ್ಯ ಎಂಬುದನ್ನು ಕರಾರುವಕ್ಕಾಗಿ ನಿರೂಪಿಸಿದ್ದಾರೆ.

ದಿಗಂತ ವಿಶೇಷ

ಎರಡು ಎಕರೆ 10 ಗುಂಟೆ ಜಾಗದಲ್ಲಿ ಮಿಶ್ರಬೆಳೆಯಾಗಿ ಹೀರೇಕಾಯಿ ಬೆಳೆಯನ್ನು 30 ಗುಂಟೆಯಲ್ಲಿ ಬೆಳೆದಿದ್ದು, ಸಾಲಿನಿಂದ ಸಾಲಿಗೆ 5ಅಡಿ ಜಿಗ್‌ಜಾಗ್ ಪದ್ಧತಿಯಲ್ಲಿ ಬಿತ್ತನೆ ಮಾಡಿದ್ದು, ಮಧ್ಯೆ ಮಿಶ್ರ ಬೆಳೆಯಾಗಿ 4 ಅಡಿಗೆ ಒಂದರಂತೆ ಟೊಮ್ಯಾಟೋ ಬೆಳೆದಿದ್ದಾರೆ. ಒಂದು ಎಕರೆ ಜಾಗದಲ್ಲಿ ಜವಾರಿ ಮತ್ತು ಹೈಬ್ರಿಡ್ ಟೊಮ್ಯಾಟೋ ಬೆಳೆಯನ್ನು ಪ್ರತ್ಯೇಕವಾಗಿ ಬೆಳೆದಿದ್ದಾರೆ. ಇನ್ನುಳಿದ 20 ಗುಂಟೆ ಜಾಗದಲ್ಲಿ ಸೌತೆಕಾಯಿ ಮಿಶ್ರಬೆಳೆಯಾಗಿ 3 ಅಡಿ ಅಂತರದಲ್ಲಿ ಕ್ಯಾಪ್ಸಿಕಂ(ಡೊಳ್ಳು ಮೆಣಸಿನ ಕಾಯಿ) ಬೆಳೆದಿದ್ದಾರೆ. ಎಲ್ಲ ಬೆಳೆಗಳನ್ನು ಸತತವಾಗಿ 45 ದಿನಗಳ ಕಾಲ ಕಟಾವು ಮಾಡಿದ್ದಾರೆ. 2



> ರೈತರ ಬೆಳೆಗಳನ್ನು ಸಂರಕ್ಷಿಸುವತ್ತ ಕೋಲ್ಡ್ ಸ್ಟೋರೇಜ್‌ಗಳನ್ನು ನಿರ್ಮಿಸುವ ಮೂಲಕ ನೆರವಾಗಬೇಕು. ನಮ್ಮ ಭಾಗದಲ್ಲಿನ ತೋಟಗಾರಿಕಾ ಬೆಳೆಗಳ ಸಂರಕ್ಷಣೆಗೆ ಕೋಲ್ಡ್ ಸ್ಟೋರೇಜ್ ನಿರ್ಮಿಸಬೇಕೆಂಬ 20 ವರ್ಷಗಳ ಬೇಡಿಕೆಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು.
>
> ■ ಧನಪಾಲ ಯಲ್ಲಪ್ಪ ಹಳಿಂಗಳಿ

90 ದಿನ, ₹20 ಲಕ್ಷ ಗಳಿಸಿದ ಧನಪಾಲ

ಸೋಲಾರ್ ಪಂಪ್‌ಸೆಟ್‌ಗಳ ಮೂಲಕ ತಾವು ನಿರ್ಮಿಸಿಕೊಂಡಿರುವ ಕೃಷಿ ಹೊಂಡದಲ್ಲಿ ನೀರು ಸಂಗ್ರಹಿಸಿ ಹನಿ ನೀರಾವರಿ ಪದ್ಧತಿಯಲ್ಲಿ ಬೆಳೆಗೆ ನೀರು ಪೂರೈಸಿದ್ದಾರೆ. ಮಿಶ್ರಬೆಳೆಗೆ ಮಲ್ಚಿಂಗ್ ಪೇಪರ್ ಅಳವಡಿಸಿರುವುದರಿಂದ ಬೆಳೆಗೆ ಉಣಿಸಿದ ನೀರು ಬಾಷ್ಪೀಕರಣಗೊಳ್ಳದಿರುವುದರಿಂದ ಬೆಳೆಗೆ ತೇವಾಂಶದ ಕೊರತೆಯಾಗದು. ಪ್ರತಿ ಎಕರೆಗೆ ತಿಪ್ಪೆ ಗೊಬ್ಬರದ ಜತೆಗೆ ಕುರಿಗೊಬ್ಬರ, ಕಾಂಪೋಸ್ಟ್ ಗೊಬ್ಬರ ನೀಡುತ್ತಾರೆ. ಮೂಲ 4 ಎಕರೆ ಜಮೀನು ಹೊಂದಿದ್ದ ಧನಪಾಲ ಈಗ 45 ಎಕರೆಗೂ ಹೆಚ್ಚಿನ ಜಮೀನು ಸ್ವಂತವಾಗಿ ಮತ್ತು ಲೀಜ್ ಮೇಲೆ ಹೊಂದಿದ್ದು, ಅಲ್ಲಿ ವಾಣಿಜ್ಯ ಬೆಳೆಯಾದ ಕಬ್ಬು ನಾಟಿ ಮಾಡಿದ್ದಾರೆ.

12-10-2022
Hosadiganta
Pg 01

12-10-2022
S-Karnataka
Pg 09

ಆಹಾರಧಾನ್ಯ ಉತ್ಪಾದನೆ ಇಳಿಕೆ

ಹವಾಮಾನ ಇಲಾಖೆ ಈ ಬಾರಿ ವಾಡಿಕೆ ಸ್ವರೂಪದ ಮುಂಗಾರಿನ ಮುನ್ಸೂಚನೆ ನೀಡಿದ್ದರೂ ಹವಾಮಾನ ವೈಪರೀತ್ಯದಿಂದಾಗಿ ಸಮರ್ಪಕವಾಗಿ ಮಳೆಯಾಗದೆ ಭತ್ತ,ಗೋದಿಗಳಂತಹ ಪ್ರಮುಖ ಆಹಾರ ಧಾನ್ಯಗಳ ಇಳುವರಿ ಕಡಿಮೆಯಾಗುವ ಭೀತಿ ತಲೆದೋರಿದೆ. ಇದರಿಂದಾಗಿ ಆಹಾರ ಹಣದುಬ್ಬರ ನಿಯಂತ್ರಣ ಸಾಧ್ಯವಾದೀತೇ ಎಂಬ ಸಂಶಯ ಹೆಪ್ಪುಗಟ್ಟಲಾರಂಭಿಸಿದೆ.

ಸೆಪ್ಟೆಂಬರ್ 25ರ ಹೊತ್ತಿಗೆ ಕೃಷಿ ಸಚಿವಾಲಯದ ಪ್ರಕಟಣೆಯ ಪ್ರಕಾರ ಆಹಾರ ಧಾನ್ಯ ಸೇರಿದಂತೆ ಎಲ್ಲಾ ಮುಂಗಾರು ಬೆಳೆಗಳ ಬಿತ್ತನೆ ಕ್ಷೇತ್ರ 1,097.57 ಲಕ್ಷ ಹೆಕ್ಟೇರ್‌ದಷ್ಟಾಗಿದ್ದು, ಕಳೆದ ವರ್ಷದಲ್ಲಾಗಿದ್ದ 1,111.36 ಲಕ್ಷ ಹೆಕ್ಟೇರ್‌ಗೆ ಹೋಲಿಸಿದರೆ ಶೇ.1.2ರಷ್ಟು ಇಳಿಕೆಯಾಗಿದೆ. ಭತ್ತ 401.56 ಲಕ್ಷ, ಬೇಳೆಕಾಳುಗಳು 132.83 ಲಕ್ಷ, ತೃಣಧಾನ್ಯಗಳು 183.57 ಲಕ್ಷ, ಎಣ್ಣೆ ಬೀಜಗಳು 191.75 ಲಕ್ಷ ಹೆಕ್ಟೇರ್ ಕ್ಷೇತ್ರಗಳಲ್ಲಿ ಬಿತ್ತನೆಯಾಗಿದೆ. ಭತ್ತ, ಬೇಳೆಕಾಳು ಕ್ಷೇತ್ರ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.5.5, ಶೇ.3.9ರಷ್ಟು ಇಳಿಮುಖವಾಗಿದೆ. ಎಣ್ಣೆಬೀಜಗಳು ಶೇ.0.8ರಷ್ಟು ಕಡಿಮೆಯಾದರೆ ತೃಣ ಧಾನ್ಯಗಳ ಕ್ಷೇತ್ರ ಶೇ.1.2ರಷ್ಟು ಅಲ್ಪ ಏರಿಕೆಯಾಗಿದೆ. ಭತ್ತ ಇಳುವರಿ ಕಡಿಮೆಯಾದರೆ ಅಕ್ಕಿ ಉತ್ಪಾದನೆಯೂ ಇಳಿಕೆಯಾಗಲಿದೆ. ಈಗಿನ ಮುಂಗಾರು ಹಂಗಾಮಿಗೆ ಅಕ್ಕಿ ಉತ್ಪಾದನೆ ಸುಮಾರು 70 ಲಕ್ಷ ಟನ್‌ದಷ್ಟು ಕಡಿಮೆಯಾಗುವದೆಂದು ಅಂದಾಜಿಸಲಾಗಿದೆ. ಗಾಯದ ಮೇಲೆ ಬರೆ ಎಂಬಂತೆ ಗೋದಿ ಉತ್ಪಾದನೆ ಸಹ ವರ್ಷದ ಆರಂಭದಲ್ಲಿ 40 ಲಕ್ಷ ಟನ್ ಕಡಿಮೆಯಾಗಿದೆ ಎಂದು ಹೇಳಲಾಗಿದೆ. ಈಗಾಗಲೇ ಆಹಾರ ಹಣದುಬ್ಬರದ ಬೇಗೆಯಿಂದ ಬಸವಳಿದವರಿಗೆ ಇದು ಖಂಡಿತ ಸಿಹಿ ಸುದ್ದಿಯಲ್ಲ.



ಇದ್ದುದರಲ್ಲಿ ಭತ್ತ ಇಳುವರಿ ಕುಸಿತದ ಒತ್ತಡ ನಿವಾರಿಸಲು ಕೇಂದ್ರ ಸರಕಾರ ಅಕ್ಕಿ ರಫ್ತಿಗೆ ತಡೆಯೊಡ್ಡಿದೆ. ಸದ್ಯಕ್ಕೆ ಕೇಂದ್ರ ಸರಕಾರದ ಬಳಿ ಆಹಾರ ಧಾನ್ಯದ ದಾಸ್ತಾನು ಕಳೆದ ವರ್ಷದಲ್ಲಿದ್ದಕ್ಕಿಂತ ಕಡಿಮೆ ಇದೆ. ಹಿಂದಿನ ಮುಂಗಾರು ಹಂಗಾಮಿನಲ್ಲಿ 51 ದಶಲಕ್ಷ ಟನ್ ಪ್ರಮಾಣದ ಅಕ್ಕಿ ಮತ್ತು ಭತ್ತ ದಾಸ್ತಾನು ಮಾಡಲಾಗಿದೆ. ಈ ಬಾರಿ 51.8 ದಶಲಕ್ಷ ಟನ್ ಸಂಗ್ರಹಣೆಯ ಗುರಿ ಹೊಂದಲಾಗಿದೆ. ಒಂದು ವೇಳೆ ಇದು ಕೈಗೂಡಿದರೆ ಆಹಾರ ಹಣದುಬ್ಬರ ಕೊಂಚ ತಹಬಂದಿಗೆ ಬಂದೀತೆಂಬ ಆಸೆ ಇದೆ. ಏಕೆಂದರೆ ಈ ಸಲ ಗೋದಿ ಸಂಗ್ರಹಣೆ ಕೂಡ ಸಮರ್ಪಕವಾಗಿಲ್ಲ. ಅಕ್ಕಿ, ಭತ್ತ, ಗೋದಿ ಸಂಗ್ರಹಣೆ ಸರಿಯಾದ ಪ್ರಮಾಣದಲ್ಲಿ ಆದರೆ ಸಂಕಷ್ಟ ನಿವಾರಣೆಯಾಗುವ ಸಂಭವ ಇದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

ಅಡಿಕೆ ತೋಟದಲ್ಲಿ ಭೂತಾನ್ ಬಿರುಗಾಳಿ



■ ನರಸಿಂಹ ಅಡಿ/ ಮಹೇಶ ಹೆಗಡೆ

ಕಳೆದ ವಾರ ಕೇಂದ್ರ ಸರ್ಕಾರ ಭೂತಾನ್‌ನಿಂದ 17 ಸಾವಿರ ಮೆಟ್ರಿಕ್ ಟನ್ ಹಸಿರು ಅಡಿಕೆ ಆಮದಿಗೆ ನಿರ್ದಿಷ್ಟ ಕನಿಷ್ಠ ಬೆಲೆಯ ನಿಬಂಧನೆ, ಸುಂಕ ಕಲ್ಪದೆಯೇ ಹಸಿರು ನಿಶಾನೆ ತೋರಿರುವುದು ಬೆಳೆಗಾರರ ನಿದ್ದೆಗೆಡಿಸಿದೆ. ಶೀಘ್ರದಲ್ಲಿ ಆರಂಭವಾಗಲಿರುವ ಕೊಯ್ಲಿನ ಹಂಗಾಮು, ಕೂಲಿ ಸಮಸ್ಯೆ ನಿರ್ವಹಣೆಯ ಮಧ್ಯೆ ಮಾರುಕಟ್ಟೆಯಲ್ಲಿ ದರದ ಏರುಪೇರು ರೈತರನ್ನು ತೊಳಲಾಟಕ್ಕೆ ತಳ್ಳಿದೆ.

ಇತ್ತೀಚಿನ ವರ್ಷಗಳಲ್ಲಿ ಆಮದು ನೀತಿಯ ವ್ಯತ್ಯಾಸ ಅಡಿಕೆಯ ಮೇಲೆ ಪರಿಣಾಮ ಬೀರುತ್ತಿದೆ. ಸಾಫ್ತಾ(ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ)ದಡಿಯಲ್ಲಿ ಆಮದು ರಫ್ತಿನಲ್ಲಿಯ ಸುಂಕ ವಿನಾಯಿತಿಗಳು ಸಮಸ್ಯೆಯಾಗಿ ಪರಿಣಮಿಸಿದೆ. ಈಗ ಕೆಲ ವರ್ಷಗಳಿಂದ ಆಮದು ನೀತಿಯಲ್ಲಿನ ನಿಯಮಗಳು ಅಡಿಕೆ ಆಮದು ನಿರ್ಬಂಧಕ್ಕೆ ಸಹಕಾರಿಯಾಗಿವೆ. ಒಂದು ನಿರ್ದಿಷ್ಟ ಕನಿಷ್ಠ ಬೆಲೆ ಮತ್ತು ಆಮದು ಸುಂಕಗಳಿಂದ ಆಮದಿಗೆ ಹಿನ್ನಡೆ ಆಗುತ್ತಿತ್ತು. ಇದೆಲ್ಲವನ್ನೂ ಮೀರಿ ಬಾಂಗ್ಲಾ ಗಡಿಯಲ್ಲಿ ಕಳ್ಳ ಸಾಗಾಣಿಕೆಯ ಮೂಲಕ ಭಾರತದ ಮಾರುಕಟ್ಟೆಗೆ ಹೊರ್ಳಿಸುವ ಮಾಫಿಯಾ ಕಾರ್ಯೋನ್ಮುಖವಾಗಿರುವ ವರದಿಗಳು ಕೇಳಿ ಬರುತ್ತಿದ್ದವು. ಇವುಗಳ ನಡುವೆಯೂ ರಾಜ್ಯದ ಅಡಿಕೆ ಕೃಷಿಕರು ಸ್ಥಿತಿಂತರಾಗಿಯೇ ಇದ್ದರು.

ಆದರೆ ಈ ಸ್ಥಿತಿಂಗೆ ಈಗ ಭೂತಾನ್ ಅಡಿಕೆ ಭಂಗವನ್ನುಂಟುಮಾಡಿದೆ. ಕೇಂದ್ರ ಸರ್ಕಾರದ ಆಮದು ಅನುಮತಿಯೊಂದಿಗೆ ಕಳೆದ ಒಂದು ವಾರದಿಂದ ಅಡಿಕೆ ದರವು 2 ರಿಂದ 5 ಸಾವಿರದವರೆಗೆ ಇಳಿಕೆ ಕಂಡಿದೆ. ಇದು ಮುಂದಿನ ಹಂಗಾಮಿನ ವ್ಯವಹಾರಕ್ಕೆ ಭಾರೀ ಸಮಸ್ಯೆ ಉಂಟಾಗುವಂತೆ ಕಾಣುತ್ತಿದೆ.



ಸಮಸ್ಯೆಗಳ ಸರಮಾಲೆ

ಅಡಿಕೆ ಬೆಳೆಯು ಅದಾಗಲೇ ಕೂಲಿ ಆಳುಗಳ ಕೊರತೆ, ಕೊಳೆರೋಗ, ಹಳದಿ ಎಲೆಚುಕ್ಕಿ ರೋಗ, ಬೇರುಹುಳು ರೋಗ ಇತ್ಯಾದಿ ಅನೇಕ ಸಮಸ್ಯೆ ಎದುರಿಸುತ್ತಿದೆ. ಇವುಗಳ ಜೊತೆಗೆ ಅತಿವೃಷ್ಟಿಯೂ ಸೇರಿದೆ. ಇದರ ಮಧ್ಯೆ ಈಗ ಕೇಂದ್ರ ಸರ್ಕಾರದ ಆಮದು ನೀತಿ ತಲೆನೋವಾಗಿ ಕಾಡಲಾರಂಭಿಸಿದೆ. ಅಡಿಕೆ ಗುಣಮಟ್ಟ ಹಾಳು ಮಾಡುವ ಕೃತಕ ಬಣ್ಣ ಮತ್ತು ಮಿಶ್ರಿತ ಅಡಿಕೆ ಮಾರಾಟ ಜಾಲಗಳ ಕುತಂತ್ರ ಗುಟ್ಟಾಗಿ ಉಳಿದಿಲ್ಲ. ಭೂತಾನ್ ಆಮದು ಅಡಿಕೆ ಬೆಳೆಯುವ ಪ್ರಮುಖ 5 ಜಿಲ್ಲೆಗಳ ಆರ್ಥಿಕ ಸ್ಥಿತಿಯ ಮೇಲೆ ಹೊಡೆತ ನೀಡುವ ಲಕ್ಷಣ ಕಾಣುತ್ತಿದೆ. ಸಣ್ಣ ಮತ್ತು ಅತಿಸಣ್ಣ ರೈತನ ಆರ್ಥಿಕ ವ್ಯವಸ್ಥೆಯ ಮೇಲೆ ಕೇಂದ್ರ ಸರ್ಕಾರದ ನಿಲುವಿನ ನೇರ ಪರಿಣಾಮ ಮುಂದಿನ ದಿನಗಳಲ್ಲಿ ತೀವ್ರ ಆಘಾತಕಾರಿ ಆಗುವುದರಲ್ಲಿ ಸಂಶಯವಿಲ್ಲ.

ಕೇಂದ್ರ ಸರ್ಕಾರ ಕೊಡಲೇ ತನ್ನ ಆಮದು ನೀತಿಯ ಬಗ್ಗೆ ನಿರ್ಧಾರ ಬದಲಿಸದಿದ್ದರೆ ಕನಿಷ್ಠ 25 ಲಕ್ಷ ಕುಟುಂಬಗಳ ಆರ್ಥಿಕ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವುದು ನಿಶ್ಚಿತ.

ದೇಶದಲ್ಲಿ ಅಡಿಕೆ ಬೆಳೆಯಲ್ಲಿ ಮೊದಲ ಸ್ಥಾನದಲ್ಲಿರುವ ಕರ್ನಾಟಕದಲ್ಲಿ ಇದು ಸಾಂಪ್ರದಾಯಿಕ ತೋಟಗಾರಿಕಾ ಬೆಳೆಯಾಗಿದೆ. ಬೇರೆ ದೇಶಗಳಲ್ಲಿ ಇದೊಂದು ಕಾಡು ಉತ್ಪನ್ನವಾಗಿದ್ದು, ಅಲ್ಲಿನ ನಿರ್ವಹಣೆಯ ವೆಚ್ಚ 0% ಆಗಿದೆ. ರಾಜ್ಯದ ಸಹಿತ ದೇಶದಲ್ಲಿ ಅಡಿಕೆ ಬೆಳೆಯುವ ಪ್ರದೇಶಗಳಲ್ಲಿ ಉತ್ಪನ್ನದ ನಿರ್ವಹಣಾ ವೆಚ್ಚ ತೀವ್ರ ಹೆಚ್ಚಾಗಿದೆ. ಹೊರ ದೇಶಗಳ ಹಾಗೂ ನಮ್ಮ ದೇಶದಲ್ಲಿಯ ನಿರ್ವಹಣೆ ವೆಚ್ಚದ ನಡುವೆ ಭಾರೀ ವ್ಯತ್ಯಾಸವಿದ್ದು, ನಮ್ಮ ರಾಜ್ಯದಲ್ಲಿ ಲಕ್ಷಾಂತರ ಜನ ಅಡಿಕೆ ಮಾರುಕಟ್ಟೆಯ ಮೇಲೆ ಬದುಕು ಕಟ್ಟಿಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಆಂತಹ ಕುಟುಂಬಗಳ ಬದುಕು ಯಾವ ರೀತಿಯ ತಿರುವು ಪಡೆಯಲಿದೆ, ಯಾವ ಹಂತ ತಲುಪಲಿದೆ ಎನ್ನುವುದನ್ನು ಊಹಿಸುವುದೂ ಅಸಾಧ್ಯವಾಗಿದೆ. ಬಹುತೇಕ ಮಲೆನಾಡು, ಕರಾವಳಿ ರೈತರು ನಂಬಿರುವ ಅಡಿಕೆ ಬೆಳೆಯಲ್ಲಿ ವ್ಯತ್ಯಾಸವಾದರೆ ಮುಂದಿನ ದಿನ ಲಕ್ಷಾಂತರ ಕೃಷಿಕರು ಮತ್ತು ಕಾರ್ಮಿಕರು ಬೀದಿಗೆ ಬರುವ ಸ್ಥಿತಿ ದೂರವಿಲ್ಲ ಎನ್ನುವುದು ತಜ್ಞರ ಅಭಿಪ್ರಾಯವಾಗಿದೆ.

> ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಿಲುವಿನಿಂದ ಇಲ್ಲಿಯ ತನಕ ಅಡಿಕೆ ದರ ಸ್ಥಿರವಾಗಿತ್ತು. ಆದರೆ ಈಗ ಸ್ವಲ್ಪ ಏರಿಳಿತ ಕಾಣುತ್ತಿದೆ. ಇದಕ್ಕೆ ರೈತರು ಆತಂಕ ಪಡುವ ಅವಶ್ಯಕತೆಯಿಲ್ಲ. ಈ ಏರಿಳಿತ ಮಾರುಕಟ್ಟೆಯಲ್ಲಿ ಸಾಮಾನ್ಯ. ಈಗ ಆಮದು ನೀತಿಯಲ್ಲಿಯ ಗೊಂದಲಗಳ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಮಾತನಾಡಿದ್ದೇವೆ. ಆತಂಕಪಡುವುದು ಬೇಡ. ಸರ್ಕಾರದ ಆಮದು ನಿಲುವಿನಲ್ಲಿ ವ್ಯತ್ಯಾಸವಿಲ್ಲ. ಮುಂದೆ ಸರಿಯಾಗಿಲಿದೆ. ಊಹಾಪೋಹಗಳಿಗೆ ತಲೆಕೆಡಿಸಿಕೊಳ್ಳುವುದು ಬೇಡ. ಕೇವಲ ವದಂತಿಗಳಿಂದಲೇ ಏರಿಳಿತ ಆಗುವುದು ಸಹಜ. ಅದು ಮುಂದಿನ ದಿನಗಳಲ್ಲಿ ಸರಿ ಹೋಗಲಿದೆ. ಅನವಶ್ಯಕ ಭಯಪಡುವುದು ಬೇಡ.

■ ವಿಶ್ವೇಶ್ವರ ಹೆಗಡೆ ಕಾಗೇರಿ
ವಿಧಾನಸಭಾಧ್ಯಕ್ಷ

---

09 | 12 ಅಕ್ಟೋಬರ್ 2022 ಬುಧವಾರ | ಸಂಯುಕ್ತ ಕರ್ನಾಟಕ

ಕೃಷಿ ವಾಣಿಜ್ಯ

ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ಮಲೆನಾಡಿನ ಅಡಿಕೆ ಕೃಷಿಕರಿಗೆ ಈಗ ಭೂತಾನ್‌ದಿಂದ ಸುಂಕರಹಿತ ಅಡಿಕೆ ಆಮದು ಬರಸಿಡಿಲಾಗಿ ಬಂದೆರಗಿದೆ. ಅಡಿಕೆ ಬೆಳೆಯುವ ಪ್ರಮುಖ 5 ಜಿಲ್ಲೆಗಳ ಆರ್ಥಿಕ ಸ್ಥಿತಿಯ ಮೇಲೆ ಹೊಡೆತ ನೀಡುವ ಲಕ್ಷಣ ಕಾಣುತ್ತಿದೆ. ಸಣ್ಣ ಮತ್ತು ಅತಿಸಣ್ಣ ರೈತನ ಆರ್ಥಿಕ ವ್ಯವಸ್ಥೆಯ ಮೇಲೆ ಕೇಂದ್ರ ಸರ್ಕಾರದ ನಿಲುವಿನ ನೇರ ಪರಿಣಾಮ ಮುಂದಿನ ದಿನಗಳಲ್ಲಿ ತೀವ್ರ ಆಘಾತಕಾರಿ ಆಗುವುದರಲ್ಲಿ ಸಂಶಯವಿಲ್ಲ.

> ಹಾಲಿ 17 ಸಾವಿರ ಟನ್ ಹಸಿರು ಅಡಿಕೆ ಹೊರತಾಗಿಯೇ ಬಂದರೆ ತೊಂದರೆಯಿಲ್ಲ. ಆದರೆ ಮೌಲ್ಯವರ್ಧನೆಯಾದರೆ ಎರಡೂವರೆ ಸಾವಿರ ಟನ್ ಆಗಲಿದೆ. ಸೆಂಟೆಡ್ ಅಡಿಕೆಗೆ ಶೇ.180ರಷ್ಟು ತೆರಿಗೆ ಇದೆ. ಕಟೆಡ್ ಅಡಿಕೆಗೆ ಶೇ.18ರಷ್ಟು ಇದೆ. ಆದರೆ ಸೆಂಟೆಡ್ ಸುಪಾರಿ ಹೆಸರಲ್ಲಿ ಕಟೆಡ್ ಬಂದರೆ ಆಪಾಯವಿದೆ. ಈಗ ಸೆಂಟೆಡ್ ಸುಪಾರಿ ಹೆಸರಲ್ಲಿ ಕಟೆಡ್ ಅಡಿಕೆ ಆಮದಾಗುತ್ತಿದೆ ಎನ್ನಲಾಗಿದೆ. ಅದು ಸಮಸ್ಯೆ ಆಗಬಹುದು. ಆಂತಹ ಆತಂಕದ ಲೋಪದೋಷಗಳ ನಿವಾರಣೆ ಆಗಬೇಕು. ಇಲ್ಲವಾದರೆ ಅಡಿಕೆ ಮಾರುಕಟ್ಟೆಯ ಮೇಲೆ ಪರಿಣಾಮ ಬೀರಬಹುದು.

■ ರವೀಶ ಹೆಗಡೆ
ಮುಖ್ಯ ಕಾರ್ಯನಿರ್ವಾಹಕ, ಟಿಎಸ್‌ಎಸ್, ಶಿರಸಿ

ಅಪಾಯ ಇದ್ದದ್ದೇ...

ಕೇಂದ್ರ ಸರ್ಕಾರದ ವಾಣಿಜ್ಯ ಸಚಿವಾಲಯದ ಅಡಿಯಲ್ಲಿ ಬರುವ ವಿದೇಶ ವ್ಯಾಪಾರ ನಿರ್ದೇಶನಾಲಯದ ಮುಖ್ಯಸ್ಥರು ಭೂತಾನ್ ದೇಶದಿಂದ 17 ಸಾವಿರ ಟನ್ ಅಡಿಕೆಯನ್ನು ಜಲಮಾರ್ಗವಾಗಿ ಬಂದರಿನಿಂದ ಮಾತ್ರ ಆಮದು ಮಾಡಿಕೊಳ್ಳಬಹುದು ಎಂದು ಆದೇಶ ನೀಡಿದ್ದಾರೆ. ಆಮದು ಮಾಡಿಕೊಳ್ಳುವ ಅಡಿಕೆಯು ಹಸಿರು ಅಡಿಕೆಯಾಗಿರಬೇಕು ಎಂದು ಆದೇಶದಲ್ಲಿ ಹೇಳಿದೆ. ಆದರೆ ಒಂದು ಬಾರಿ ವಿದೇಶಿ ಅಡಿಕೆ ಆಮದು ಮಾಡಿಕೊಳ್ಳುವ ಆದೇಶವಾದರೆ ಮುಂದೆ ಹಸಿರು ಅಡಿಕೆಯ ಜೊತೆಯಲ್ಲಿ ಕೆಂಪಡಿಕೆ ಹಾಗೂ ಚಾಲಿ ಅಡಿಕೆಯು ಆಮದು ಆಗುವದರಲ್ಲಿ ಯಾವ ಸಂಶಯವಿಲ್ಲ. ಇದರಿಂದ ದೇಶಿ ಅಡಿಕೆ ಬೆಳೆಗಿಗೆ ಕುಂಠಿತವಾಗಿ ದರ ಸ್ಥಿರವಾಗಿ ಉಳಿಯದೆ ಏರು ಪೇರು ಆಗುತ್ತದೆ ಎಂಬುದು ಬೆಳೆಗಾರರ ಅಭಿಪ್ರಾಯವಾಗಿದೆ.

ಇತ್ತೀಚಿನ ಒಂದು ವರ್ಷದಿಂದ ಸಲ್ಪ ಮಟ್ಟಿಗೆ ಅಡಿಕೆ ಧಾರಣೆಯಲ್ಲಿ ಸ್ಥಿರತೆ ಕಂಡುಬಂದಿದೆ. ಈ ಹಿಂದೆ ಗುಟ್ಕಾ ರದ್ದು ಮಾಡುವ ಸುದ್ದಿ ಹಬ್ಬಿದಾಗಲೆಲ್ಲ ಧಾರಣೆ ಕುಸಿತವನ್ನು ಕಂಡಿತ್ತು. ವ್ಯಾಪಾರಸ್ಥರು ಅಡಿಕೆ ಖರೀದಿಗೆ ಹಿಂದೇಟು ಹಾಕುತ್ತಿದ್ದರು. ಈಗ ಕೇಂದ್ರ ಸರ್ಕಾರ ಅಧಿಕೃತವಾಗಿ ವಿದೇಶಿ ಅಡಿಕೆ ಆಮದು ತೀರ್ಮಾನ ಬೆಳೆಗಾರರನ್ನು ತಲ್ಲಣಗೊಳಿಸಿದೆ. ಇದಕ್ಕೆ ಉದಾಹರಣೆಯೆಂದರೆ ಕೇಂದ್ರ ಸರ್ಕಾರ ಹಸಿರು ಅಡಿಕೆ ಆಮದು ನೀತಿ ಪ್ರಕಟವಾದ ಕೂಡಲೆ ಕೆಂಪಡಿಕೆ ಹಾಗೂ ಚಾಲಿ ಅಡಿಕೆಯ ಧಾರಣೆಯ ಮೇಲೆ ಪರಿಣಾಮವಾಗಿ ಪ್ರತೀ ಕ್ವಿಂಟಾಲ್ ಅಡಿಕೆ 10 ಸಾವಿರ ಇಳಿಕೆಯನ್ನು ಕಂಡಿದೆ.

ಗತಿ ಏನು?

ಹಸಿರು ಅಡಿಕೆ ಕೇವಲ 17 ಸಾವಿರ ಟನ್ ಮಾತ್ರ ಆಮದು ಮಾಡಿಕೊಳ್ಳುತ್ತದೆ ಎನ್ನುವ ಸ್ಪಷ್ಟನೆ ನಂಬಲು ಅಸಾಧ್ಯವಾಗಿದೆ. ಏಕೆಂದರೆ ಕೇವಲ ಕಾಗದದ ಹಾಳೆಯ ಮೇಲೆ ಲೆಕ್ಕ ಅವಲಂಬಿತವಾಗಿ ಮೇಲ್ನೋಟಕ್ಕೆ 17 ಸಾವಿರ ಟನ್ ಅಡಿಕೆ ದೇಶಕ್ಕೆ ಬರುತ್ತಿದೆ ಎಂದು ತೋರಿಸಲಾಗುತ್ತದೆ. ಆದರೆ ಕಾಳ ಸಂತೆಯಲ್ಲಿ ನಿಜವಾದ ಲೆಕ್ಕವನ್ನು ತಿಷ್ಟಿಸಿ ಲಕ್ಷಾಂತರ ಟನ್ ಆಮದು ಆಗುವುದು ಗ್ಯಾರಂಟಿಯಾಗಿದೆ. ಇದರಿಂದ ಭಾರತ ದೇಶದ ಅಡಿಕೆಗೆ ಬೆಡಿಕೆ ಹಂತ ಹಂತವಾಗಿ ಕಡಿಮೆಯಾಗಿ ವಿದೇಶಿ ಅಡಿಕೆಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಾಗುವ ಲಕ್ಷಣಗಳು ಕಂಡುಬರುತ್ತದೆ ಎನ್ನುವುದು ಹಲವು ಜನರ ಅಭಿಪ್ರಾಯವಾಗಿದೆ.

ದೇಶದಲ್ಲಿ 18 ಲಕ್ಷ ಎಕರೆ ಅಡಿಕೆ ತೋಟವಿದೆ. 12 ಲಕ್ಷ ಟನ್ ಅಡಿಕೆ ಬೆಳೆಯಲಾಗುತ್ತಿದೆ. ಎರಡು ಕೋಟಿಗಿಂತಲೂ ಹೆಚ್ಚಿನವರು ಅಡಿಕೆ ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ಅಡಿಕೆ ಸಂಬಂಧಿಸಿದ ವಿವಿಧ ಉದ್ಯಮಿಗಳು 6 ಕೋಟಿಗೂ ಹೆಚ್ಚಿನವರು ಇದ್ದಾರೆ. ಈಗ ಕೇಂದ್ರ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಮೇಲಿನ ಅಂಕಿ ಅಂಶಗಳನ್ನು ಅವಲೋಕಿಸಿದರೆ ಕನಿಷ್ಠ 3 ಕೋಟಿಗೂ ಅಧಿಕ ಜನರಿಗೆ ಆರ್ಥಿಕ ಸಂಕಷ್ಟ ಎದುರಾಗುವುದು ಖಚಿತ ಎಂದು ಹೇಳಬಹುದಾಗಿದೆ.

ಕೊರತೆ ಇದಯೇ?

ವಿದೇಶದಿಂದ ಅಡಿಕೆ ಆಮದು ಮಾಡಿಕೊಳ್ಳಬೇಕಾದರೆ ದೇಶದಲ್ಲಿ ಕೊರತೆ ಇರಬೇಕಾಗುತ್ತದೆ. ಆದರೆ ಆಶ್ಚರ್ಯದ ಸಂಗತಿಯೆಂದರೆ ನಮ್ಮ ದೇಶದಲ್ಲಿ ಅಡಿಕೆಗೆ ಕೊರತೆಯೇ ಇಲ್ಲವಾಗಿದೆ. ಸದ್ಯದ ಉತ್ಪನ್ನ ನಮ್ಮ ದೇಶಕ್ಕೆ ಬೇಡಿಕೆ ಪೂರೈಕೆ ಮಾಡುವಷ್ಟು ಇದೆ. ಹೀಗಿರುವಾಗ ಆಮದು ನೀತಿಯನ್ನು ಸರ್ಕಾರ ತಳೆದಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ.

ಈಗಾಗಲೇ ಕ್ಯಾಂಪ್ಕೋ ಮ್ಯಾಮ್ಕೋಸ್ ಸಂಸ್ಥೆಗಳು ಅಡಿಕೆ ಆಮದು ನಿಲ್ಲಿಸಿ ಎಂದು ಕೇಂದ್ರ ಕೃಷಿ ಸಚಿವರಿಗೆ ಮನವಿಯನ್ನು ಮಾಡಿದ್ದಾರೆ. ಹೀಗೆ ಅನೇಕ ವಿರೋಧಗಳು ಇರುವಾಗಲೆ ಅಧಿಕೃತವಾಗಿ ಆಮದು ನೀತಿಯನ್ನು ಜಾರಿಗೆ ತರಲು ಹೊರಟಿರುವ ಕೇಂದ್ರ ಸರ್ಕಾರದ ನಿರ್ದಾರದ ಹಿಂದೆ ಯಾವ ಶಕ್ತಿ ಕೆಲಸ ಮಾಡುತ್ತಿದೆ ಎನ್ನುವುದು ಹಲವರ ಪ್ರಶ್ನೆಯಾಗಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಮತ್ತೊಮ್ಮೆ ಆಮದು ನೀತಿಯ ಬಗ್ಗೆ ಮರುಪರಿಶೀಲನೆಯನ್ನು ನಡೆಸಬೇಕು ಎಂಬುದು ತಜ್ಞರ ಅಭಿಪ್ರಾಯವಾಗಿದೆ.

---

2 ಸಾವಿರಕ್ಕೂ ಹೆಚ್ಚು ಹುದ್ದೆ ರದ್ದು • ವಿವಿಧ ಇಲಾಖೆಗಳ ವಿಲೀನಕ್ಕೆ ಚಿಂತನೆ

ಕೃಷಿ ಇಲಾಖೆಗೆ ರೇಷ್ಮೆ, ತೋಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸುವುದು ಹಾಗೂ ಕೆಲವು ಇಲಾಖೆಗಳನ್ನು ಮುಚ್ಚುವ ಮೂಲಕ ಎರಡು ಸಾವಿರಕ್ಕೂ ಹೆಚ್ಚು ಹುದ್ದೆಗಳನ್ನು ರದ್ದುಗೊಳಿಸುವ ತೀರ್ಮಾನವನ್ನು ಕಂದಾಯ ಸಚಿವರ ನೇತೃತ್ವದ ಸಂಪುಟ ಉಪ ಸಮಿತಿ ಕೈಗೊಂಡಿದೆ.

ವಿವಿಧ ಇಲಾಖೆಗಳ ವಿಲೀನ ಕುರಿತು ಕಂದಾಯ ಸಚಿವ ಆರ್. ಅಶೋಕ ಅಧ್ಯಕ್ಷತೆಯ ಸಂಪುಟ ಉಪ ಸಮಿತಿ ಮಂಗಳವಾರ ಮೂರನೇ ಸಭೆ ನಡೆಸಿತು. ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಪಾಲ್ಗೊಂಡಿದ್ದರು. ಕೆಲವು ಇಲಾಖೆಗಳು, ನಿಗಮ, ಪ್ರಾಧಿಕಾರಗಳ ರದ್ದತಿ ನಿರ್ಧಾರವನ್ನು ಸಭೆ ಕೈಗೊಂಡಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅಶೋಕ, 'ಅನಗತ್ಯವಾಗಿರುವ ಹುದ್ದೆಗಳು ಮತ್ತು ಇಲಾಖೆಗಳನ್ನು ವಿಲೀನಗೊಳಿಸುವುದು ಅಥವಾ ರದ್ದು ಮಾಡುವುದರ ಮೂಲಕ ರಾಜ್ಯ ಸರ್ಕಾರದ ಬೊಕ್ಕಸದ ಮೇಲಿನ ಹೊರೆಯನ್ನು ತಗ್ಗಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಮಂಗಳವಾರದ ಸಭೆಯಲ್ಲಿ ಉಪ ಸಮಿತಿ ಹಲವು ನಿರ್ಧಾರಗಳನ್ನು ಕೈಗೊಂಡಿದ್ದು, ಸಂಪುಟದ ಒಪ್ಪಿಗೆ ಯೊಂದಿಗೆ ಶೀಘ್ರದಲ್ಲಿಯೇ ಅನುಷ್ಠಾನಕ್ಕೆ ತರಲಾಗುವುದು' ಎಂದು ತಿಳಿಸಿದರು.

ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳನ್ನು ಕೃಷಿ ಇಲಾಖೆಯೊಂದಿಗೆ ವಿಲೀನಗೊಳಿಸಲಾಗುವುದು. ಸಚಿವಾಲಯ ಸೇರಿದಂತೆ ಎಲ್ಲ ಹಂತಗಳಲ್ಲೂ ಈ ಬದಲಾವಣೆ ಜಾರಿಯಾಗಲಿದೆ. ಕೆಳಹಂತದ ಹುದ್ದೆಗಳನ್ನು ವಿಲೀನಗೊಳಿಸಿ, ಹಿರಿಯ ಅಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಲಾಗುವುದು. ಈ ಇಲಾಖೆಗಳಲ್ಲಿ ಸುಮಾರು 2,000 ಹುದ್ದೆಗಳು ರದ್ದಾಗಲಿವೆ ಎಂದು ವಿವರಿಸಿದರು.

ರೇಷ್ಮೆ ಬೆಳೆಯುವ ಪ್ರದೇಶಗಳಿಗೆ ಸೀಮಿತವಾಗಿ ರೇಷ್ಮೆ ಕೃಷಿ ಅಧಿಕಾರಿಗಳ ಹುದ್ದೆಗಳನ್ನು ಉಳಿಸಿಕೊಳ್ಳಲಾಗುವುದು. ಮೇಲಿನ ಹಂತದಲ್ಲಿ ಎರಡೂ ಇಲಾಖೆಗಳ ಜವಾಬ್ದಾರಿಯನ್ನು ಕೃಷಿ ಇಲಾಖೆಗೆ ವಹಿಸಲಾಗುವುದು. ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯನ್ನು ಶಿಕ್ಷಣ ಇಲಾಖೆಯ ಜತೆ ವಿಲೀನಗೊಳಿಸಲಾಗುತ್ತದೆ. ಕೆಲವು ನಿಗಮಗಳನ್ನು ರದ್ದುಗೊಳಿಸುವ ತೀರ್ಮಾನವೂ ಆಗಿದೆ ಎಂದರು.

ಅರಣ್ಯ ಅಧಿಕಾರಿಗಳ ಹುದ್ದೆಗಳಿಗೆ ಕತ್ತರಿ

ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಸೇರಿದಂತೆ ರಾಜ್ಯದ ಅರಣ್ಯ ಇಲಾಖೆಯಲ್ಲಿರುವ ಹಿರಿಯ ಅಧಿಕಾರಿಗಳ ಹುದ್ದೆಗಳನ್ನು ಗಣನೀಯವಾಗಿ ತಗ್ಗಿಸಲು ಸಂಪುಟ ಉಪಸಮಿತಿಯು ಚಿಂತನೆ ನಡೆಸಿದೆ. ಪೂರಕವಾಗಿ ಸಮಗ್ರ ವಿವರ ಒದಗಿಸಲು ಅರಣ್ಯ ಇಲಾಖೆಗೆ ಸೂಚಿಸಿದೆ.

'ಮಲೆನಾಡು, ಕರಾವಳಿ ಜಿಲ್ಲೆಗಳನ್ನು ಹೊರತುಪಡಿಸಿ ಜಿಲ್ಲೆಗೆ ಒಂದು ಜಿಲ್ಲಾ ಅಥವಾ ಉಪ ಅರಣ್ಯ ಸಂರಕ್ಷಣಾಧಿಕಾರಿ, ಉಪ ವಿಭಾಗಕ್ಕೆ ಒಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಲ್ಲೂಕಿಗೆ ಒಂದು ವಲಯ ಅರಣ್ಯಾಧಿಕಾರಿ ಹುದ್ದೆ ಉಳಿಸಿಕೊಳ್ಳಬೇಕು. ಉಳಿದ ಅಧಿಕಾರಿಗಳ ವೃಂದದ ಹುದ್ದೆಗಳನ್ನು ರದ್ದುಗೊಳಿಸಿ ಕೆಳಹಂತದ ಸಿಬ್ಬಂದಿ ಸಂಖ್ಯೆ ಹೆಚ್ಚಿಸಲು ಇಲಾಖೆಯ ವರದಿ ಕೇಳಲಾಗಿದೆ' ಎಂದು ಸಚಿವ ಅಶೋಕ ಹೇಳಿದರು.

ಜಿಲ್ಲೆಗೊಂದೇ ಯೋಜನಾ ಪ್ರಾಧಿಕಾರ: ಅಶೋಕ

ಒಂದೇ ಜಿಲ್ಲೆಯೊಳಗೆ ಹಲವು ಯೋಜನಾ ಪ್ರಾಧಿಕಾರಗಳಿವೆ. ಅವೆಲ್ಲವನ್ನೂ ರದ್ದುಪಡಿಸಿ ಜಿಲ್ಲಾ ಮಟ್ಟದಲ್ಲಿ ಒಂದೇ ಯೋಜನಾ ಪ್ರಾಧಿಕಾರ ಉಳಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಅಶೋಕ ವಿವರಿಸಿದರು.

ಬೆಂಗಳೂರು ಸುತ್ತಮುತ್ತ ಹತ್ತಕ್ಕೂ ಹೆಚ್ಚು ಯೋಜನಾ ಪ್ರಾಧಿಕಾರಗಳಿವೆ. ನೆಲಮಂಗಲ, ಹೊಸಕೋಟೆ, ದೇವನಹಳ್ಳಿ, ಮಾಗಡಿ, ಚನ್ನಪಟ್ಟಣ, ರಾಮನಗರ ಹೀಗೆ ಹಲವು ಯೋಜನಾ ಪ್ರಾಧಿಕಾರಗಳು ಅಸ್ತಿತ್ವದಲ್ಲಿವೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ವ್ಯಾಪ್ತಿ ಪ್ರತ್ಯೇಕ ಪ್ರಾಧಿಕಾರವಿದೆ. ಈ ಎಲ್ಲವನ್ನೂ ರದ್ದುಗೊಳಿಸಿ ಜಿಲ್ಲೆಗೆ ಒಂದೇ ಯೋಜನಾ ಪ್ರಾಧಿಕಾರ ಉಳಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದರು.

ರದ್ದಾಗಲಿರುವ ನಿಗಮಗಳು

- ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ
- ಮೈಸೂರು ತಂಬಾಕು ಕಂಪನಿ
- ಕರ್

Russia's new farmers and their significance



A new generation of Russian farmer-entrepreneurs moving away from Soviet-era collectivisation are tapping into an old Russian institution, the Dacha, and new trends in organic farming

A R VASAVI

A visit to Russia invokes several responses: awe for its complex history and significant achievements; deep appreciation for its rich literature and arts; shock at the tragedies that unfolded in the past, and trepidation for what the future holds. Post-Soviet Russia is a nation and society in the remaking. The Soviet past is sought to be qualified with a cautious eye and tone, and the post-1990s neo-liberalism, a time of *bezzakoniye* (lawlessness) that lasted until 2004 and which produced oligarchs (many now as expatriates) is seen as a time of disruption. With Soviet-era forms of welfare, especially for children and the elderly in the domains of health, education and housing, strengthened, there is an overall aura of economic well-being and prosperity that marks the major cities of Moscow and St Petersburg.

A nation in transition, a new nationalism seeks to challenge US-NATO hegemony and makes assertions for its own place in the new world order. The result is a complex national political-economy which its citizens negotiate with their rich repertoire of black humour, overt and covert forms of dissent, and multiple forms of social solidarities. Reflecting these trends is the new statuary that celebrates many of the past victories (against Napolean in 1812; against Nazi Germany in 1945), and a belated recognition of the mass persecution and deaths through Stalin's *Gulags* and their commemoration through the new 'Wall of Grief', and statues that bemoan the holocaust. A triumvirate of symbols mark the public space of Moscow; of the continued power of the Kremlin as representing state hegemony; the growth of capitalism visible in the shiny new business districts and its buildings, and in the extant restoration and revival of the churches and monasteries of the Russian orthodox church.

Amid all this flux and uncertainty, where the past and future seem to collide to make for a challenging present, there is what travel writer Laurens Van der Post noted as the 'abiding Russia' which is to be found amongst its people; in their abilities to negotiate the strong-armed state, to be sensitive social citizens, sharp intellectuals, and caring community and family members are Russia's ordinary citizens.

Representing these people are the 'new farmers' who seem to draw on the rich heritage of knowledge and skills that the cultural institution of the *Dacha* (summer cottages) has made possible. With their practices of cultivating small plots for family needs, preserving summer vegetables and fruits for the long winters, and a deep sense of conviviality in which produce, food and drink are shared with family and friends, the *Dacha* has become a source for a revival of post-collectivisation farms.

About 200 km away from Moscow and set in Kaluga district, which forms part of the *Kaluzhskaya* or 'black soil belt', this August we visited two unusual farms that hold the promise of post-industrial and post-collectivisation land use. Dr Elena, a gastroenterologist, who has drawn on her own childhood learning about herbs and healing, now manages a 10-hectare herbal garden. Growing a range of aromatic and healing herbs such as St John's wort, wild oregano, calendula, sunflower, varieties of mint, rosemary, marigold and manarda, that makes the farm look like a fairy tale setting, she and her son, Artyom, not only dry, process and package these therapeutic herbal oils but also provide training in the cultivation, processing and use of these herbs to young people. Hosting us to a sumptuous lunch of a wide variety of Russian vegetarian food, Elena elaborates on the 'pain' that industrial-chemical agriculture has caused to the land and to the food systems. Stressing the need for food to also be healing and the positive contributions of organic agriculture, she highlights the possibility of a new programme that the Russian government seeks to promote in which such herbal gardens will be part of new clusters of production where organic agriculture and local arts and crafts will form part of the new rural economies. Such programmes are part of new policies enunciated by the current government in which, 'self-reliance' or 'import substitution' are being promoted.

In this, agriculture is placed as a primary economic activity, which will enable not only national self-sufficiency but also new global economic leverage. Just a few kilometres away from this herbal garden is a 250-hectare organic dairy farm that is managed by Tatyana, a meteorologist turned entrepreneur. Residing in Moscow but visiting the farm on a weekly basis, Tatyana works the land to grow organic wheat and oats and to herd and graze 90 cattle and three horses with a full-time staff of only four persons. Meat, milk, cream and cheese are sold in Moscow and in this she is ably assisted by her niece, Darya, a young graduate who grew up in a farm in the Altai region.

While both farms represent the possibilities of new, small-scale and specialised agriculture in Russia, they face several challenges. Since much of the cultivated land (66%) is under large Russian agri-business conglomerates, small farmers (representing 30% of land under citizens) struggle to make inroads into the market and to have adequate labour, infrastructure and profits.

Nearly 10 years into the dairy farm, Tatyana's investment has not paid huge profits and she only just about cuts it fine. Her commitment to sustaining the farm workers (a milkmaid, a mechanic cum manager, and a shepherd), who are paid regular salaries, means that she cannot easily disengage from the farm or sell it. Both Elena and Tatyana explicate that infrastructure in the rural areas and to farms is inadequate, costs of machinery prohibitive, information about schemes and support policies is not easily forthcoming, and the biggest problem they face is shortage of labour.



Melon festival at a Russian mall.



A Russian vegetarian spread by Dr Elena (extreme right). A gastroenterologist turned farmer, she manages a 10-hectare farm with her son Artyom (below).



Artyom in the herbarium on their farm 200 km off Moscow.

In a country where only about 37% of the scarce population lives in the vast rural areas, youth and especially trained personnel are hard to come by. The difficulties faced by these 'small farmers' are linked to the fact that Russia's 'new proprietarianism' has led to either State, para-state or private corporates to manage mega production units. Its production of wheat, barley, oats, buckwheat, and dairy and meat industries now generate a plenitude of produce that are high in quality and reasonable in rates. But, largely run on industrial and chemical bases, these farms pose questions of ecological viability and long-term sustainability.

In such a context, it is the small, diversity-based and organic units that are worked by people like Elena and Tatyana that stand as models for alternative and ecologically sound possibilities. As both the 'new farmers' represent, their endeavours tie-in with the possibility of realising the real potential of the nation's agro-ecological and culinary heritages.

In the endeavours of these 'new farmers', who seek to make possible the great land heritage of the vast Russian plains, what one must sense are the spirits of two great Russians, Chayanov and Vavilov. Alexander Chayanov (1888-1937) had sought through his deep scholarship to recognise that small holdings are capable of agricultural productivity. But he was hounded, marginalised, and silenced for his ideas that contradicted the ideology of forced collectivisation or large holdings as inevitable for high productivity.

Similarly, the great Nikolai Vavilov (1887-1943), had travelled the world to identify the sources of key grains and seeds and his work has laid the foundations for the establishment of the valuable 'world centres for biodiversity'. While the international science world recognised him for his pioneering work, in Soviet Russia he was made a scapegoat for the failures of collectivised agriculture and starved to death in Stalin's *Gulags*.

In all of these lessons of history, where the issues of agricultural productivity and the role of peasants have been forced into either political and market ideologies of high productivity, it has been the land and its people who have become victims. At a time, when India's own trajectory seems to veer towards the marginalisation of the small farmer and when the models of corporate, chemical-industrial agriculture are being promoted, it is only apposite that we remember both, the tragedies that the Soviet regime imposed on farmers and those who upheld the importance of small-scale farming, and the possibility that 'new' and 'small farmers' of present-day Russia hold for our collective futures across the world.

(The writer is a Social Anthropologist based in Karnataka)

Tatyana, a meteorologist turned entrepreneur, at her organic dairy farm. New farmers like her seek to prove that small holdings are capable of agricultural productivity. PHOTOS BY THE AUTHOR